ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 494

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 21.02.2022

ಉತ್ತರಿಸುವ ಸಚಿವರು : ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಹಾಸನ ಜಿಲ್ಲೆಯ 07 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಪಡಿತರ ಚೀಟಿಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲೆಯ 07 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಡಿತರ ಚೀಟಿಗಳನ್ನು ಪಡೆದಿರುವ ಫಲಾನುಭವಿಗಳ ವಿವರ ಕೆಳಕಂಡಂತಿದೆ. (see table below)
ಆ	ಸದರಿ ಜಿಲ್ಲೆಯ 07 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಹೊಸದಾಗಿ ಪಡಿತರ ಚೀಟಿಗಳನ್ನು ಕೋರಿ ಬಂದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	ಸದರಿ ಜಿಲ್ಲೆಯ 07 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆದ್ಯತಾ ಪಡಿತರ ಚೀಟಿಯನ್ನು ಕೋರಿ 24023 ಅರ್ಜಿಗಳು ಹಾಗೂ ಆದ್ಯತೇತರ ಪಡಿತರ ಚೀಟಿಯನ್ನು ಕೋರಿ 9442 ಅರ್ಜಿಗಳು ಸ್ವೀಕೃತವಾಗಿರುತ್ತವೆ. ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.
ಇ	ಈ 07 ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸದರಿ ಇಲಾಖೆಯಿಂದ ಪಡಿತರ ಚೀಟಿಯನ್ನು ಪಡೆಯಲು ಬಾಕಿ ಇರುವ ಅರ್ಜಿಗಳನ್ನು ಎಷ್ಟು ದಿನಗಳಲ್ಲಿ ವಿಲೇವಾರಿ ಮಾಡಲಾಗುವುದು;	ಪಡಿತರ ಚೀಟಿಯನ್ನು ಕೋರಿ ಅರ್ಜಿ ಸಲ್ಲಿಸಿರುವ ಅರ್ಹ ಅರ್ಜಿದಾರರಿಗೆ ಹೊಸ ಪಡಿತರ ಚೀಟಿಯನ್ನು ನೀಡುವ ಕಾರ್ಯ ಜಾರಿಯಲ್ಲಿದ್ದು, ಅರ್ಜಿಗಳ ಪರಿಶೀಲನೆ ಮೇಲೆ ಹೊಸ ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ.

ವಿಧಾನಸಭಾಕ್ಷೇತ್ರ	ಅಂ.ಅನ್ನ	ಆದ್ಯತಾ	ಆದ್ಯತೇತರ
ಸಕಲೇಶಪುರ	3975	61816	2991
ಬೇಲೂರು	3327	58014	1743
ಶ್ರವಣಬೆಳಗೊಳ	3287	58842	4843
ಅರಕಲಗೂಡು	4512	83325	4100
ಹೊಳೆನರಸೀಪುರ	3433	59438	3285
ಹಾಸನ	1913	52490	8447
ಅರಸೀಕೆರೆ	3042	64286	1741
ಒಟ್ಟು	23489	438211	27150

ಈ.	ಪಡಿತರ ಚೀಟಿಯನ್ನು ಹಂಚಿಕೆ ಮಾಡಲು ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳೇನು; ಬಾಕಿ ಇರುವ ಪಡಿತರ ಚೀಟಿಗಳನ್ನು ಎಷ್ಟು ದಿನದೊಳಗೆ ವಿತರಿಸಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು)	ರಾಜ್ಯದಲ್ಲಿ ಅಂತ್ಯೋದಯ ಅನ್ನ ಮತ್ತು ಆದ್ಯತಾ ಕುಟುಂಬಗಳನ್ನು ಗುರುತಿಸುವ ಬಗ್ಗೆ ರಾಜ್ಯ ಸರ್ಕಾರವು 2017 ರಲ್ಲಿ ಆದೇಶ ಹೊರಡಿಸಿದೆ. ಈ ಆದೇಶದ ಪ್ರಕಾರ ಅಂತ್ಯೋದಯ ಅನ್ನ ಮತ್ತು ಆದ್ಯತಾ(ಪಿ.ಹೆಚ್.ಹೆಚ್) ಪಡಿತರ ಚೀಟಿಯನ್ನು ಹೊಂದಲು ನಿಗದಿಪಡಿಸಿರುವ ಮಾನದಂಡಗಳು ಕೆಳಕಂಡಂತಿವೆ. • ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು. • ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು. • ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು. • ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು. ಪಡಿತರ ಚೀಟಿಯನ್ನು ಕೋರಿ ಅರ್ಜಿ ಸಲ್ಲಿಸಿರುವ ಅರ್ಹ ಅರ್ಜಿದಾರರಿಗೆ ಹೊಸ ಪಡಿತರ ಚೀಟಿಯನ್ನು ನೀಡುವ ಕಾರ್ಯ ಜಾರಿಯಲ್ಲಿದ್ದು, ಅರ್ಜಿಗಳ ಹಿರಿತನದ ಮೇಲೆ ಹೊಸ ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ.

ಆನಾಸ 33 ಡಿಆರ್ಎ 2022 (ಇ-ಆಫೀಸ್)

(ಉಮೇಶ್ ವಿ. ಕತ್ತಿ)
ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

LCO NO: 494

ಹಾಸನ ಜಿಲ್ಲೆಯ 07 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಹೊಸದಾಗಿ ಪಡಿತರ ಚೀಟಿಗಳನ್ನು ಕೋರಿ ಬಂದಿರುವ ಅರ್ಜಿಗಳವಿವರ

ಕ್ರ.ಸಂ	ತಾಲ್ಲೂಕು	ಮತಕ್ಷೇತ್ರದ ಹೆಸರು	ಸ್ವೀಕರಿಸಿರುವ ಆದ್ಯತಾ ಅರ್ಜಿಗಳು	ವಿತರಿಸಲಾದ ಆದ್ಯತಾ ಅರ್ಜಿಗಳು	ತಿರಸ್ಕರಿಸಿದ ಆದ್ಯತಾ ಅರ್ಜಿಗಳು	ಬಾಕಿ ಇರುವ ಆದ್ಯತಾ ಅರ್ಜಿಗಳು
1	ಆಲೂರು	ಸಕಲೇಶಪುರ	1201	767	82	352
2	ಅರಸೀಕೆರೆ	ಅರಸೀಕೆರೆ	3764	1783	502	1479
3	ಅರಸೀಕೆರೆ	ಬೇಲೂರು	895	367	133	395
4	ಅರಕಲಗೂಡು	ಅರಕಲಗೂಡು	1960	817	222	907
5	ಬೇಲೂರು	ಬೇಲೂರು	3035	912	667	1456
6	ಚನ್ನರಾಯಪಟ್ಟಣ	ಶ್ರವಣಬೆಳಗೊಳ	2851	1451	206	1192
7	ಚನ್ನರಾಯಪಟ್ಟಣ	ಹೊಳೆನರಸೀಪುರ	593	232	25	336
8	ಹಾಸನ	ಹಾಸನ	3717	1092	866	1763
9	ಹಾಸನ	ಹೊಳೆನರಸೀಪುರ	804	209	196	411
10	ಹಾಸನ	ಸಕಲೇಶಪುರ	372	91	94	187
11	ಸಕಲೇಶಪುರ	ಸಕಲೇಶಪುರ	2943	1430	471	1042
12	ಹೊಳೆನರಸೀಪುರ	ಹೊಳೆನರಸೀಪುರ	1135	643	85	407
13	ಹೊಳೆನರಸೀಪುರ	ಅರಕಲಗೂಡು	753	322	66	365
	ಒಟ್ಟು		24023	10116	3615	10292

ಕ್ರ.ಸಂ	ತಾಲ್ಲೂಕು	ಮತಕ್ಷೇತ್ರದ ಹೆಸರು	ಸ್ವೀಕರಿಸಿರುವ ಆದ್ಯತೇತರ ಅರ್ಜಿಗಳು	ವಿತರಿಸಲಾದ ಆದ್ಯತೇತರ ಅರ್ಜಿಗಳು	ತಿರಸ್ಕರಿಸಿದ ಆದ್ಯತೇತರ ಅರ್ಜಿಗಳು	ಬಾಕಿ ಇರುವ ಆದ್ಯತೇತರ ಅರ್ಜಿಗಳು
1	ಆಲೂರು	ಸಕಲೇಶಪುರ	346	320	12	14
2	ಅರಸೀಕೆರೆ	ಅರಸೀಕೆರೆ	1305	1054	221	30
3	ಅರಸೀಕೆರೆ	ಬೇಲೂರು	234	151	49	34
4	ಅರಕಲಗೂಡು	ಅರಕಲಗೂಡು	723	643	63	17
5	ಬೇಲೂರು	ಬೇಲೂರು	836	759	7	70
6	ಚನ್ನರಾಯಪಟ್ಟಣ	ಶ್ರವಣಬೆಳಗೊಳ	1108	743	319	46
7	ಚನ್ನರಾಯಪಟ್ಟಣ	ಹೊಳೆನರಸೀಪುರ	155	97	47	11
8	ಹಾಸನ	ಹಾಸನ	2525	2488	22	15
9	ಹಾಸನ	ಹೊಳೆನರಸೀಪುರ	517	496	14	7
10	ಹಾಸನ	ಸಕಲೇಶಪುರ	182	172	7	3
11	ಸಕಲೇಶಪುರ	ಸಕಲೇಶಪುರ	919	857	32	30
12	ಹೊಳೆನರಸೀಪುರ	ಹೊಳೆನರಸೀಪುರ	471	452	19	0
13	ಹೊಳೆನರಸೀಪುರ	ಅರಕಲಗೂಡು	121	114	5	2
	ಒಟ್ಟು		9442	8346	817	279

Commissioner
Food, Civil Supplies and,
Consumer Affairs Department
No. 8, Cunningham Road,
Bangalore - 52.